# ಬದಲಾವಣೆಯೇ ನೀವಾಗಿ | ಕಲಿಕೆಯ ಒಂದು ವಿಜಯಯಾತ್ರೆ

ರೋನಿತಾ ಶರ್ಮಾ ಮತ್ತು ಶಿಲ್ಪಿ ಹಂಡಾ

'ಅನುಭವವನ್ನು ಆಧರಿಸಿದ ಕಲಿಕಾ ಪ್ರಕ್ರಿಯೆಯಲ್ಲಿ ಎರಡು ಗುರಿಗಳಿವೆ. ಒಂದು ನಿರ್ದಿಷ್ಟ ವಿಷಯದ ವಿಶೇಷಗಳ ಕಲಿಕೆ ಮತ್ತೊಂದು ತನ್ನದೇ ಸ್ವಂತ ಕಲಿಕಾ ಪ್ರಕ್ರಿಯೆಯ ಕಲಿಕೆ' ಡೇವಿಡ್ ಎ.ಕೋಲ್ಬ್.


ಅನುಭವಜನ್ಯವಾದ ಕಲಿಕೆ (Experiential learning) ಅಧಿಕೃತವಾದ ಉದ್ದೇಶವನ್ನು ಹೊಂದಿದ್ದು, ಅದು ಜೀವನದ ನೈಜ ಅನುಭವವನ್ನು ಆಧರಿಸಿದ್ದಾಗಿದೆ. ಅದರಲ್ಲಿ ಬೋಧನಾಶಾಸ್ತ್ರದ ಮಾಧ್ಯಮವಾದ ಮಕ್ಕಳ ಸ್ಥಳೀಯ ಹಿನ್ನೆಲೆಯಿಂದ ಆರಂಭಗೊಂಡು ಜ್ಞಾನ, ಕೌಶಲ ಮತ್ತು ಗುಣಗಳ ಅಭಿವೃದ್ಧಿಯನ್ನು ಒಳಗೊಂಡಿರುತ್ತದೆ. ನೈಜ ಹಾಗು ಸಂದರ್ಭೋಚಿತ ಅನುಭವಗಳಿಗೆ ಒಳಗಾಗುವುದರಿಂದ ಪ್ರತಿಯೊಂದು ಮಗುವೂ ಕಲಿಕೆಯಲ್ಲಿ ವೈಯಕ್ತಿಕವಾಗಿ ತೊಡಗಿಸಿಕೊಳ್ಳಲು, ಅಂತಹ ಕಲಿಕೆಯನ್ನು ಅರ್ಥಪೂರ್ಣವಾಗಿ ಮಾಡಲು ಸಾಧ್ಯವಾಗುತ್ತದೆ ಮತ್ತು ಸಮಸ್ಯೆಗಳನ್ನು ಪರಿಹರಿಸುವ ಹಾಗು ನಿರ್ಧಾರ ಕೈಗೊಳ್ಳುವಂತಹ ಬಹುಮುಖ್ಯ ಕೌಶಲಗಳನ್ನು ಬೆಳೆಸಿಕೊಳ್ಳಲೂ ಸಹಾಯವಾಗುತ್ತದೆ. ಅನುಭವಜನ್ಯವಾದ ಕಲಿಕೆಯು ತನ್ನ ನಾಲ್ಕು ಪ್ರಮುಖ ಅಂಗಗಳ ಮೂಲಕ ಅತ್ಯುನ್ನತವಾದ ಚಿಂತನೆ ಮತ್ತು ಸಹಯೋಗದ ಕೌಶಲಗಳನ್ನು ಸಾಧಿಸಲು ಅವಕಾಶಗಳನ್ನು ನೀಡುತ್ತದೆ. ಡೇವಿಡ್ ಎ ಕೋಲ್ಬ್ ಅವರು ಅಭಿವೃದ್ಧಿಪಡಿಸಿದ ಅನುಭವಜನ್ಯ ಕಲಿಕಾ ಪರಿಕಲ್ಪನೆಯು ಕಲಿಕಾ ಪ್ರಕ್ರಿಯೆಯನ್ನು ನಾಲ್ಕು ಮೂಲಭೂತ ತತ್ತ್ವಾಧಾರಿತ ಅಂಗಗಳನ್ನಾಗಿ ವಿಭಾಗಿಸುತ್ತದೆ:

ಮೂರ್ತ ಅನುಭವ (Concrete Experience) ಎಂದರೆ ಜ್ಞಾನಗ್ರಹಣದ ಎಲ್ಲ ಆಯಾಮಗಳನ್ನು ಒಳಗೊಂಡ ಸಮಸ್ಯೆ / ಪರಿಸ್ಥಿತಿಯೊಂದಿಗೆ ಮಗು ಸಿಕ್ಕಿಹಾಕಿಕೊಂಡಿರುವ ವಾತಾವರಣ.

ಪರ್ಯಾಲೋಚನೆಯುಕ್ತ ಅವಲೋಕನ (Reflective Observation) ಮಗುವು ತನ್ನ ಮುಂದಿರುವ ಕೆಲಸವನ್ನು ಇನ್ನಷ್ಟು ಚಿಂತನೆಗೆ ಹಾಗು ಕಲಿಕೆಯನ್ನು ವಿಮರ್ಶೆಗೆ ಒಳಪಡಿಸುವಂತೆ ಮಾಡುವ ಕ್ರಮ.

ಅಮೂರ್ತ ಪರಿಕಲ್ಪನೆ (Abstract Conceptualisation)– ವಿದ್ಯಾರ್ಥಿಯು ತನ್ನ ಪರಿಧಿಯನ್ನು ಬಿಟ್ಟು ಯೋಚನೆ ಮಾಡುವುದು ಮತ್ತು ಕಲಿಕಾ ಫಲಿತಾಂಶವನ್ನು ಸಾಧಿಸಲು ಇತರರೊಂದಿಗೆ ಸಹಯೋಗದಲ್ಲಿ ತೊಡಗುವುದು. ಚಿಂತನಶೀಲ ಮತ್ತು ಸಂವಾದದಿಂದ ಹುಟ್ಟಿಕೊಂಡ ಅರ್ಥಪೂರ್ಣ ಅನುಭವಗಳು ಮಗುವನ್ನು ಆಲೋಚನೆಗೆ ಹಚ್ಚುತ್ತವೆ.

ಸಕ್ರಿಯ ಪ್ರಯೋಗ (Active Experimentation) – ಗುರಿಗೆ ಸನಿಹವಿರುವುದರ ಸೂಚನೆ– ನೈಜ ಹಾಗು ಅರ್ಥಪೂರ್ಣ ತಿಳುವಳಿಕೆ.




**ಹಕ್ಕುಗಳ ಪರಿಕಲ್ಪನೆಯ ಪರಿಚಯ**

ಭಾರತದ ಶಾಲೆಗಳಲ್ಲಿ ಪ್ರಜಾಪ್ರಭುತ್ವದ ಪರಿಕಲ್ಪನೆ, ಭಾರತದ ಸಂವಿಧಾನ ಮತ್ತು ಮೂಲಭೂತ ಹಕ್ಕುಗಳನ್ನು ಸಾಮಾನ್ಯವಾಗಿ ಮಾಧ್ಯಮಿಕ ಮತ್ತು ಪ್ರೌಢಶಾಲಾ ಶಿಕ್ಷಣದ ಹಂತಗಳಲ್ಲಿ ಪರಿಚಯ ಮಾಡಿಸಲಾಗುತ್ತದೆ. ಮೂಲಭೂತ ಹಕ್ಕುಗಳನ್ನು ಒಂದು ವಿಷಯವಾಗಿ ಎನ್‌ಸಿಇಆರ್‌ಟಿ ಪಠ್ಯಪುಸ್ತಕಗಳಲ್ಲಿ ಆರನೇ ತರಗತಿಯಿಂದ ಹಂತಹಂತವಾಗಿ ಪರಿಚಯ ಮಾಡಲಾಗುತ್ತದೆ. ಈ ವಯಸ್ಸಿನಲ್ಲಿ ಈ ಎಲ್ಲ ಹಕ್ಕುಗಳು ಒಂದು ರೀತಿಯಲ್ಲಿ ಅಮೂರ್ತ ಸ್ವರೂಪದ್ದಾಗಿರುತ್ತವೆ. ಹಾಗಾಗಿ ಇವುಗಳನ್ನು ಪರಿಚಯ ಮಾಡಿಸುವ ಸಂದರ್ಭದಲ್ಲಿ ಅತ್ಯಂತ ಹೆಚ್ಚಿನ ಮುತುವರ್ಜಿಯನ್ನು ವಹಿಸಬೇಕಾಗುತ್ತದೆ; ನಿರೂಪಣೆ, ರಾಜಕೀಯಕ್ಕೆ ಸಂಬಂಧಿಸಿದ ಕಾರ್ಟೂನುಗಳು ಇತ್ಯಾದಿ ಮಾಧ್ಯಮಗಳನ್ನು ಇದಕ್ಕೆ ಬಳಸಿಕೊಳ್ಳಬೇಕು. ಇದನ್ನು ಅತ್ಯಂತ ಸ್ಪಷ್ಟವಾದ ರೀತಿಯಲ್ಲಿ ವಿವರಿಸುವ ಇನ್ನೊಂದು ಮಾರ್ಗವೆಂದರೆ ಮಕ್ಕಳ ಹಕ್ಕುಗಳನ್ನು ಪರಿಚಯ ಮಾಡಿಸುವುದು. ಮಕ್ಕಳು ಅನುಭವದ ಮೂಲಕ ಕಲಿಯುವುದಕ್ಕಿಂತ ಉತ್ತಮ ವಿಧಾನ ಇನ್ನೊಂದಿರಲಾರದು!

ಗುರ್‌ಗಾಂವ್‌ನಲ್ಲಿರುವ ಹೆರಿಟೇಜ್ (ಪರಂಪರಾ) ಶಾಲೆಯಲ್ಲಿ ಕಲಿಕೆ ಮತ್ತು ಬೋಧನೆಗೆ ಪ್ರಯೋಗಾತ್ಮಕ ಮಾದರಿಯನ್ನು ಬಳಸಲಾಗುತ್ತದೆ. ಈ ಲೇಖನದ ಮೂಲಕ ನಾವು ಈ ಶಾಲೆಯಲ್ಲಿ ಬೋಧಕರಾಗಿ ಪಡೆದ ಕಾರ್ಯಾನುಭವದ ಪಯಣವನ್ನು ಹಂಚಿಕೊಳ್ಳಲಿದ್ದೇವೆ.

ಸಮಾಜ ವಿಜ್ಞಾನ ಪಠ್ಯಪುಸ್ತಕದ ಸಂಕೀರ್ಣ ಪರಿಕಲ್ಪನೆಗಳನ್ನು ಇನ್ನಷ್ಟು ಸ್ಪಷ್ಟ ಸ್ವರೂಪದಲ್ಲಿ ಮತ್ತು ವಿದ್ಯಾರ್ಥಿಗಳು ಸುಲಭವಾಗಿ ಅರ್ಥ ಮಾಡಿಕೊಳ್ಳುವ ರೀತಿಯಲ್ಲಿ ಕಾರ್ಯರೂಪಕ್ಕೆ ತರುವ ಅಗತ್ಯ ಎದುರಾದಾಗ ಬದಲಾವಣೆಯ ಭಾಗವಾಗಿ ಕುರಿತ ವಿಶೇಷ ಕಾರ್ಯಯಾತ್ರೆಯ ಯೋಚನೆ ಬಂದಿತು. ಶಿಕ್ಷಕರ ಒಂದು ಗುಂಪು 6 ಮತ್ತು 7ನೇ ತರಗತಿಗಳ ಸಮಾಜ ವಿಜ್ಞಾನ ಪಠ್ಯಪುಸ್ತಕಗಳ ಪರಿಕಲ್ಪನೆಗಳನ್ನು ಎನ್‌ಸಿಎಫ್ 2005 ಮತ್ತು ಅಮೆರಿಕದ ಸಾಮಾನ್ಯ ಪಠ್ಯಕ್ರಮ ಪ್ರಮಾಣ (Common Core Standards)ದ ಪ್ರಕಾರ ವಿಚಾರ ವಿನಿಮಯ ನಡೆಸಿತು. ನಮ್ಮ ಅರಿವಿನ ಪಾಲುದಾರರಾದ ದಿಶಾ ಇಂಡಿಯಾ ಸೆಂಟರ್ ಫಾರ್ ಎಕ್ಸ್‌ಪೀರಿಯೆನ್ಷಿಯಲ್ ಲರ್ನಿಂಗ್ ಈ ವಿಷಯದ ಚೌಕಟ್ಟಿಗೆ ಸಂಬಂಧಿಸಿದಂತೆ ಪರಿಕಲ್ಪನೆಯನ್ನು ರೂಪಿಸುವಲ್ಲಿ – ದೊಡ್ಡ ಯೋಜನೆ, ಮುಖ್ಯ ಪರಿಕಲ್ಪನೆಗಳು ಮತ್ತು ವಿಶೇಷ ಕಾರ್ಯಯಾತ್ರೆಯ ಸುಗಮ ಪಯಣವನ್ನು ನಿರ್ಧರಿಸುವುದರಲ್ಲಿ ನಮಗೆ ಸಹಾಯ ಮಾಡಿದರು.

**ಕಲಿಕೆಯ ವಿಶೇಷ ಕಾರ್ಯಯಾತ್ರೆ ಎಂದರೆ ಏನು?**

ಕಲಿಕಾ ವಿಶೇಷ ಕಾರ್ಯಯಾತ್ರೆ ಅಂತರ್‌ಶಿಸ್ತೀಯವಾದುದು ಹಾಗು ನಿಸರ್ಗ ಮತ್ತು ಸಮಾಜ ವಿಜ್ಞಾನ, ಸಾಕ್ಷರತೆ ಮತ್ತು ಸಂಖ್ಯಾಶಾಸ್ತ್ರದಿಂದ ಕೌಶಲಗಳ ಜೊತೆಗೆ ವಿಷಯವನ್ನು ಸಾಧ್ಯವಾದಷ್ಟು ಮಟ್ಟಿಗೆ ಸಮಗ್ರಗೊಳಿಸುವುದು ಇದರ ಗುರಿ. ಇಂತಹ ಒಂದು ವಿಧಾನದಿಂದ ಕಲಿಕಾರ್ಥಿಗಳನ್ನು ಪಠ್ಯಕ್ರಮದ ಚೌಕಟ್ಟಿನಿಂದಾಚೆಗೆ ಕರೆದೊಯ್ಯಲು ಸಾಧ್ಯವಾಗುತ್ತದೆ ಮತ್ತು ನಿರಂತರ ಯೋಜನೆ ರೂಪಿಸುವುದು, ಕಾರ್ಯನಿಯೋಜನೆ ಮತ್ತು ಚಿಂತನಾಕ್ರಮದ ಮೂಲಕ ಶ್ರೇಷ್ಠತೆಯನ್ನು ಸಾಧಿಸಲು ಇನ್ನೂ ಅನೇಕ ಅವಕಾಶಗಳಿಗೆ ದಾರಿ ಮಾಡಿಕೊಡಲು ಸಾಧ್ಯವಾಗುತ್ತದೆ. ಎಲ್ಲಾ ಕಲಿಕಾ ವಿಶೇಷ ಕಾರ್ಯಯಾತ್ರೆಗಳು ಮಕ್ಕಳು ಅವಲೋಕನ ನಡೆಸಲು, ಯೋಚನೆ ಮಾಡಲು, ಚಿಂತಿಸಲು, ವಿಶ್ಲೇಷಿಸಲು, ಸಮನ್ವಯಗೊಳಿಸಲು ಮತ್ತು ವಿಷಯವನ್ನು ಆಳವಾಗಿ ಅರ್ಥ ಮಾಡಿಕೊಳ್ಳಲು ಸಾಧ್ಯವಾಗುವಂತೆ ಅವರ ಸುತ್ತ ಸುತ್ತುತ್ತಿರುತ್ತವೆ. ಆಳವಾದ ತನಿಖೆಗಳನ್ನು ಕೈಗೊಳ್ಳುವ ದೃಷ್ಟಿಯಿಂದ ಕಲಿಕಾ ಕಾರ್ಯಯಾತ್ರೆಯು ಮಕ್ಕಳನ್ನು ಸಮುದಾಯದ ಕಡೆಗೆ, ಕ್ಷೇತ್ರಾಧ್ಯಯನಕ್ಕೆ ಕರೆತರಲಾಗುತ್ತದೆ ಮತ್ತು ವಿದ್ಯಾರ್ಥಿಗಳು ನೈಜ ಕಲಿಕಾ ಅನುಭವಗಳಲ್ಲಿ ತೊಡಗಿಕೊಳ್ಳಲು ಸಹಾಯವಾಗುವಂತೆ ತಜ್ಞರನ್ನು ತರಗತಿಗಳಿಗೆ ಕರೆಸಲಾಗುತ್ತದೆ.

**ಖೋಜ್‌ಗೆ ಕಾರ್ಯಯಾತ್ರೆಯ ಸಂಪರ್ಕ**

ಖೋಜ್ (KHOJ) ಎನ್ನುವುದು ಒಂದು ಬೋಧನಾ–ಶಾಸ್ತ್ರವಾಗಿದ್ದು, ಅದು ಮಕ್ಕಳಿಗೆ ತಮ್ಮ ಮನೆಗಳಿಂದ ಹೊರಗಡೆ ಇರುವ ನೈಜ ಜಗತ್ತಿನ ಅನುಭವವನ್ನು ನೀಡಲಿದೆ ಮತ್ತು ಕಲಿಕೆಯ ನೈಜ ಉದ್ದೇಶವು ದೊರೆಯುವಂತೆ ಮಾಡುತ್ತದೆ. ಈ ಪ್ರಕ್ರಿಯೆಯಲ್ಲಿ ಮಕ್ಕಳು ತಮ್ಮ ಸ್ಥಳೀಯ ಇತಿಹಾಸ, ನೈಸರ್ಗಿಕ ಪರಂಪರೆ, ಸಸ್ಯ ಮತ್ತು ಪ್ರಾಣಿ ಸಂಪತ್ತು, ಜನಸಂಖ್ಯಾಶಾಸ್ತ್ರದ ಜೊತೆಗೆ ವಿನ್ಯಾಸ, ರೂಪುರೇಷೆ ಮತ್ತು ಸಾಮಾಜಿಕ, ರಾಜಕೀಯ, ಆಡಳಿತಾತ್ಮಕ ಮತ್ತು ಆರ್ಥಿಕ ವ್ಯವಸ್ಥೆಗಳು ಹಾಗು ಅವುಗಳ ಆಂತರಿಕ ಸಂಬಂಧಗಳನ್ನು ಪರಿಶೋಧಿಸಲಿದ್ದಾರೆ. ಇವೆಲ್ಲದರಿಂದ ಮಕ್ಕಳಿಗೆ ಸ್ಥಳೀಯ ಸಮುದಾಯದ ಜೊತೆ ತಮ್ಮ ಸಂಬಂಧವನ್ನು ಕಲ್ಪಿಸಿಕೊಳ್ಳಲು ಹಾಗು ಇನ್ನಷ್ಟು ಉತ್ತಮ ರೀತಿಯಲ್ಲಿ ಅರ್ಥ ಮಾಡಿಕೊಳ್ಳಲು ಸಾಧ್ಯವಾಗುತ್ತದೆ. ಇದು ಅವರು ತಮ್ಮ ಸಮುದಾಯದ ಶ್ರೇಯೋಭಿವೃದ್ಧಿಗೆ ಸಂಬಂಧಿಸಿದಂತೆ ಜವಾಬ್ದಾರಿಯನ್ನು ವಹಿಸಿಕೊಳ್ಳಲು ಶಕ್ತಿಯನ್ನು ನೀಡುತ್ತದೆ.

ಇಂತಹ ಪ್ರತಿಯೊಂದು ಅಭ್ಯಾಸದ ಅಥವಾ ಶಿಫಾರಸಿನ ಮುಖ್ಯ ಉದ್ದೇಶವು ಎಲ್ಲವನ್ನೂ ಅಂತರ್ಗತಗೊಳಿಸುವ ಬಲವಾದ ಬದ್ಧತೆಯಾಗಿದೆ. ಜೊತೆಗೆ ಪ್ರತಿಯೊಬ್ಬ ಮಕ್ಕಳಲ್ಲೂ ಸಾಮರ್ಥ್ಯ ಮತ್ತು ಆಸಕ್ತಿಗಳಲ್ಲಿ ಇರುವ ವ್ಯತ್ಯಾಸಗಳು ಪ್ರತಿಯೊಂದು ತರಗತಿಯ ಅನಿವಾರ್ಯ ವಾಸ್ತವ ಎಂಬ ನಂಬಿಕೆಯನ್ನು ಅರ್ಥ ಮಾಡಿಕೊಳ್ಳುವುದು ಮುಖ್ಯ.

**ವಿಶೇಷ ಕಾರ್ಯಯಾತ್ರೆಯ ಹಂತಗಳು**

ಬೃಹತ್ ಯೋಜನೆ: ವಿದ್ಯಾರ್ಥಿಗಳಲ್ಲಿ ನಿರಂತರ ತಿಳುವಳಿಕೆ ಜಾರಿಯಲ್ಲಿರುವಂತೆ, ಮುಂದೆ ಅದು ಅನೇಕ ವರ್ಷಗಳ ಕಾಲ ಅವರಲ್ಲಿ ಚಿರಸ್ಥಾಯಿಯಾಗಿರುವಂತೆ ಮಾಡುವುದು ಪ್ರತಿಯೊಂದು ಕಾರ್ಯಯಾತ್ರೆಯ ಜೀವವಾಗಿದೆ. ಮಾರ್ಗದರ್ಶಿ ಪ್ರಶ್ನೆಗಳು: ಇದು ಗಮನ ಕೇಂದ್ರೀಕರಿಸಲು ಮತ್ತು ದೊಡ್ಡ ಯೋಜನೆಯನ್ನು ಸಾಧ್ಯವಾಗಿಸಲು ಸಹಾಯವಾಗುತ್ತದೆ. ದೊಡ್ಡ ಯೋಜನೆಗಳಿಂದ ಹುಟ್ಟಿಕೊಂಡ ಮಾರ್ಗದರ್ಶಿ ಪ್ರಶ್ನೆಗಳು ಹೊಸ ದಿಕ್ಸೂಚಿಯನ್ನು ಒದಗಿಸುತ್ತವೆ ಮತ್ತು ವಿಶೇಷ ಕಾರ್ಯಯಾತ್ರೆಗೆ ಗಡಿಯನ್ನು ನಿಗದಿ ಮಾಡುತ್ತವೆ.

ತೊಡಗಿಕೊಳ್ಳುವುದು: ಎಲ್ಲ ಕಲಿಕಾ ಕಾರ್ಯಯಾತ್ರೆಗಳು ಮಕ್ಕಳ ಸ್ಥಳೀಯ ಸನ್ನಿವೇಶಗಳಿಂದ ಪಡೆದ ಗಮನ ಸೆಳೆಯುವ ಅನುಭವದೊಂದಿಗೆ ಕೊನೆಗೊಳ್ಳುತ್ತವೆ. ಅದು ಮಕ್ಕಳಲ್ಲಿ ಕುತೂಹಲವನ್ನು ಹುಟ್ಟುಹಾಕಿ ಕೆಲಸದಲ್ಲಿ ತೊಡಗಿಸಿಕೊಳ್ಳುವಂತೆ ಮಾಡುತ್ತದೆ. ಇದನ್ನೇ ಸಾಮಾನ್ಯವಾಗಿ ವಿಶೇಷವಾಗಿ ಅಂಟಿಕೊಂಡು ಕೆಲಸ ಮಾಡುವುದು ಎನ್ನುತ್ತೇವೆ.

**ಕಾರ್ಯಯಾತ್ರೆಯ ಮೂಲಕ ಕಲಿಕೆ ಮತ್ತು ಖೋಜ್**

ಶಾಲೆಯ ಪ್ರತಿಯೊಂದು ವರ್ಗದಲ್ಲಿ ಒಂದು ವರ್ಷಕ್ಕೆ ಎರಡು ವಿಷಯಗಳನ್ನು ನೀಡಲಾಗುತ್ತದೆ. ಇಲ್ಲಿ ಶಿಕ್ಷಕರನ್ನು ಸಮಾಜವಿಜ್ಞಾನ ಅಥವಾ ವಿಜ್ಞಾನ ಶಿಕ್ಷಕರು ಎಂದು ನೋಡುವುದಿಲ್ಲ ಬದಲಾಗಿ ಕಾರ್ಯಯಾತ್ರೆಯ ಶಿಕ್ಷಕರು ಎಂದು ಪರಿಗಣಿಸಲಾಗುತ್ತದೆ. 2013ರಲ್ಲಿ (ನಾವು ಅಲ್ಲಿ ಕೆಲಸ ಮಾಡುತ್ತಿದ್ದ ಸಂದರ್ಭದಲ್ಲಿ) ಕಾರ್ಯಯಾತ್ರೆಗೆ ಎರಡು ಪ್ರಮುಖ ವಿಷಯಗಳನ್ನು ಕೈಗೆತ್ತಿಕೊಳ್ಳಲಾಗಿತ್ತು.

1. ಮನುಷ್ಯನ ದೇಹ– ವಿಜ್ಞಾನ ಕಲಿಕಾ ಪರಿಣಾಮಗಳ ಮೇಲೆ ಗಮನ ಹರಿಸುವುದು.
2. ಬದಲಾವಣೆಯ ಭಾಗವಾಗುವುದು– ಸಮಾಜ ವಿಜ್ಞಾನ ಕಲಿಕಾ ಪರಿಣಾಮಗಳ ಮೇಲೆ ಗಮನ ಹರಿಸುವುದು.

ಪ್ರತ್ಯೇಕವಾಗಿರುವುದರಿಂದ ಯಾವುದೇ ಕಲಿಕೆ ಸಾಧ್ಯವಿಲ್ಲದ ಕಾರಣ, ಮಕ್ಕಳು ಒಬ್ಬರಿಗೊಬ್ಬರು ಸಂಪರ್ಕದಲ್ಲಿದ್ದಾಗಲೇ ವಿಷಯಗಳನ್ನು ಮನಗಾಣುವ ಸಾಮರ್ಥ್ಯವನ್ನು ಪಡೆದು–ಕೊಳ್ಳುತ್ತಾರೆ ಎಂಬುದು ಬಹುಮುಖ್ಯ.

ಸಂವಿಧಾನದ ಮುಖ್ಯ ಮೌಲ್ಯಗಳನ್ನು ಗಮನದಲ್ಲಿಟ್ಟುಕೊಂಡು ವೈವಿಧ್ಯತೆ, ಸಮಾನತೆ, ಪ್ರಜಾಪ್ರಭುತ್ವ, ಹಕ್ಕುಗಳು ಮತ್ತು ಕರ್ತವ್ಯಗಳಂತಹ ವಿಚಾರಗಳಲ್ಲಿ ಶಿಕ್ಷಕರು ದೊಡ್ಡ ಯೋಜನೆಗಳನ್ನು ಮತ್ತು ಮಾರ್ಗದರ್ಶಿ ಪ್ರಶ್ನೆಗಳನ್ನು ರೂಪಿಸಿದರು. ಆರಂಭದಲ್ಲಿ ಶಿಕ್ಷಕರು ಭಿನ್ನವಾದ ಸಮಾಜೋ–ಆರ್ಥಿಕ ಹಿನ್ನೆಲೆಯಿಂದ ಬಂದ ಮಕ್ಕಳ ಬಗ್ಗೆ ವಿಡಿಯೊ ತೋರಿಸುವುದರ ಮೂಲಕ ಮಕ್ಕಳು ಕಾರ್ಯಯಾತ್ರೆಯಲ್ಲಿ ತೊಡಗಿಕೊಳ್ಳುವಂತೆ ಪ್ರಯತ್ನಿಸಿದರು. . ಆ ಬಳಿಕ ನಾವು ನಗರ ಮತ್ತು ಗ್ರಾಮೀಣ ಪ್ರದೇಶದ ಮಕ್ಕಳು, ಖಿನ್ನತೆಗೆ ಒಳಗಾದ ಕುಟುಂಬಗಳಿಂದ ಬಂದ ಮಕ್ಕಳು, ಪಾಲಕರ ವೈಯಕ್ತಿಕ ಅನುಭವಗಳು, ತನ್ನ ಜೊತೆ ಪಾಲಕರು ಹೇಗೆ ಕಾಲ ಕಳೆಯಬೇಕು ಎನ್ನುವ ಬಗ್ಗೆ ಮಾತನಾಡುವ ಮಗುವಿನ ಕುರಿತ ಪತ್ರಿಕೆಯ ಸುದ್ದಿಗಳತ್ತ ಗಮನಹರಿಸಿದೆವು. ಅನುಭವ ಜ್ಞಾನ ವೃದ್ಧಿ

ನಿಯಮದ ಪ್ರಕಾರ ಮುಂದಿನ ಹಂತದಲ್ಲಿ ಇದ್ದುದು ಅನುಭವ ಜ್ಞಾನ ವೃದ್ಧಿ (Building Background Knowledge) ಪ್ರಕ್ರಿಯೆ. ಇದು ತೀವ್ರತರದ ಚರ್ಚೆಯನ್ನು ಒಳಗೊಂಡಿದ್ದು, ಇದರಿಂದ ಮಕ್ಕಳು ತಮ್ಮ ಜ್ಞಾನವನ್ನು ವೃದ್ಧಿಸಿಕೊಳ್ಳಲು ಹಾಗು ಕಾರ್ಯಯಾತ್ರೆಯ ಬಗ್ಗೆ ಇನ್ನಷ್ಟು ಮಾಹಿತಿಯನ್ನು ಪಡೆದುಕೊಳ್ಳಲು ಸಾಧ್ಯವಾಗುತ್ತದೆ. ಇದು ವಿದ್ಯಾರ್ಥಿಗಳು ಓದು, ಯೋಚನೆ ಮತ್ತು ಪ್ರಶ್ನೆಗಳನ್ನು ಎತ್ತಲು ಹಾಗು ಅವರ ಜ್ಞಾನದ ಹರವನ್ನು ಮತ್ತಷ್ಟು ವಿಸ್ತರಿಸಲು ಸಮರ್ಥಗೊಳಿಸುತ್ತದೆ. ಅನುಭವ ಜ್ಞಾನವೃದ್ಧಿ ಪ್ರಕ್ರಿಯೆಯು ಕಾರ್ಯಯಾತ್ರೆಯನ್ನು ಅನಾವರಣಗೊಳಿಸಲು ಹಾಗು ಬೃಹತ್ ಯೋಜನೆಯನ್ನು ರೂಪಿಸಲು ನೆರವಾಗುತ್ತದೆ.

ಈ ಹಿನ್ನೆಲೆಯಲ್ಲಿ ಶಿಕ್ಷಕರು ಹಕ್ಕುಗಳು, ಕರ್ತವ್ಯಗಳು, ತಾರತಮ್ಯ, ನ್ಯಾಯ ಮುಂತಾದ ಕೆಲವು ಪ್ರಮುಖ ಪದಗಳ ಅರ್ಥವನ್ನು ವಿವರಿಸುವ ಪ್ರಯತ್ನವನ್ನು ಮಾಡಿದರು. ಇದಕ್ಕಾಗಿ ಅವರು ಹಲವಾರು ಓದುವ ಮತ್ತು ಗುಂಪು ಚರ್ಚೆಯನ್ನು ಬಳಸಿಕೊಂಡರು. ಇದರಿಂದಾಗಿ ವಿದ್ಯಾರ್ಥಿಗಳು 'ವೈವಿಧ್ಯತೆ' ಮತ್ತು 'ಸಮಾನತೆ'ಯ ಪರಿಕಲ್ಪನೆಗಳನ್ನು ಅರ್ಥ ಮಾಡಿಕೊಳ್ಳಲು ಸಹಾಯವಾಯಿತು.

**ವಿಶೇಷ ಕಾರ್ಯಯಾತ್ರೆಯ ಹರಿವು**

ಇದರ ಮುಖ್ಯ ಗುರಿ ಒಟ್ಟಾರೆಯಾಗಿ ಹಕ್ಕುಗಳನ್ನು ಮತ್ತು ಅದರಲ್ಲೂ ಮುಖ್ಯವಾಗಿ ಮಕ್ಕಳ ಹಕ್ಕುಗಳ ರಕ್ಷಣೆಗಾಗಿರುವ ರಾಷ್ಟ್ರೀಯ ಆಯೋಗ (National Commission for Protection of Child Rights -NCPCR) ಪ್ರಸ್ತಾಪ ಮಾಡಿದ ಮಕ್ಕಳ ಹಕ್ಕುಗಳನ್ನು ಮಾಧ್ಯಮಿಕ ಶಾಲೆಯ ಮಕ್ಕಳಿಗೆ ಪರಿಚಯಿಸುವುದು. ಭಾರತದ ಸಂವಿಧಾನದಲ್ಲಿ ಹಾಗು ವಿಶ್ವಸಂಸ್ಥೆಯ ಮಕ್ಕಳ ಹಕ್ಕುಗಳ ಸಮಾವೇಶವು ಪ್ರತಿಪಾದಿಸಿರುವಂತೆ ಮಕ್ಕಳ ಹಕ್ಕುಗಳ ಜೊತೆಗೆ ಎಲ್ಲ ಕಾನೂನುಗಳು, ನೀತಿಗಳು, ಕಾರ್ಯಕ್ರಮಗಳು ಮತ್ತು ಆಡಳಿತಾತ್ಮಕ ವ್ಯವಸ್ಥೆಗಳ ಬಗ್ಗೆ ಪರಿಚಯ ಮಾಡಿಸಬೇಕು ಎಂಬುದನ್ನು ರಾಷ್ಟ್ರೀಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗವು (ಎನ್‌ಸಿಪಿಸಿಆರ್) ಕಡ್ಡಾಯಗೊಳಿಸಿದೆ. ೦–೧೮ ವರ್ಷ ವಯಸ್ಸಿನ ಒಂದು ಮಗುವನ್ನು ಒಬ್ಬ ವ್ಯಕ್ತಿ ಎಂದು ವ್ಯಾಖ್ಯಾನ ಮಾಡಲಾಗಿದೆ.

**ಮಕ್ಕಳ ವಿಶೇಷ ಹಕ್ಕುಗಳು:**

| |
|---|
| ಸುರಕ್ಷಿತ ಪರಿಸರಕ್ಕೆ ಸಂಬಂಧಿಸಿದ ಹಕ್ಕು |
| ಸುರಕ್ಷಿತ ಪರಿಸರಕ್ಕೆ ಸಂಬಂಧಿಸಿದ ಹಕ್ಕು |
| ಸುರಕ್ಷಿತ ಪರಿಸರಕ್ಕೆ ಸಂಬಂಧಿಸಿದ ಹಕ್ಕು |
| ಆಹಾರದ ಹಕ್ಕು |
| ಆರೋಗ್ಯ ಸೇವೆಯ ಹಕ್ಕು |
| ಶಿಕ್ಷಣದ ಹಕ್ಕು |
| ಬಾಲ್ಯವಿವಾಹ ವಿರೋಧಿ ಹಕ್ಕು |
| ಸ್ವಾತಂತ್ರ್ಯದ ಹಕ್ಕು |
| ತಾರತಮ್ಯದಿಂದ ಮುಕ್ತವಾಗಿರುವ ಹಕ್ಕು |
| ಶಿಶು ದೌರ್ಜನ್ಯದಿಂದ ರಕ್ಷಿಸುವ ಹಕ್ಕು |
| ಶೋಷಣೆ ಮತ್ತು ನಿರ್ಲಕ್ಷ್ಯದಿಂದ ರಕ್ಷಿಸುವ ಹಕ್ಕು |
| ಆಲಿಸಲ್ಪಡುವ ಮತ್ತು ಮುಕ್ತವಾಗಿ ಭಾಗವಹಿಸುವ ಹಕ್ಕು |
| ಬಿಡುವು ಮತ್ತು ವಿರಾಮ ಸಮಯದ ಹಕ್ಕು |
| ಕೌಟುಂಬಿಕ ಬದುಕಿನ ಹಕ್ಕು |

## ಬಿಡುವು ಮತ್ತು ವಿರಾಮ ಸಮಯದ ಹಕ್ಕು

ಹಕ್ಕುಗಳಿಗೆ ಸಂಬಂಧಿಸಿದ ಯೋಜನೆಗಳಿಗೆ ಮೂರ್ತ ರೂಪವನ್ನು ನೀಡಲು ನಾವು ದೊಡ್ಡ ಯೋಜನೆಯನ್ನು ಚುಟುಕುಗೊಳಿಸಿದೆವು. ಕಲಿಕಾರ್ಥಿಗಳಿಗೆ ಮಕ್ಕಳ ಹಕ್ಕುಗಳನ್ನು ಪರಿಚಯಿಸುವ ಮೂಲಕ ನಾವದನ್ನು ಸಾಧ್ಯವಾಗುವಂತೆ ಮಾಡಿದೆವು. ಹನ್ನೆರಡು ಹಕ್ಕುಗಳ ನಡುವೆ ನಾವು 'ಬಿಡುವು ಮತ್ತು ವಿರಾಮ ಸಮಯದ ಹಕ್ಕು' (Right to leisure and free time) ವಿಷಯದ ಮೇಲೆ ಹೆಚ್ಚಿನ ಗಮನ ಹರಿಸಲು ಆಯ್ಕೆ ಮಾಡಿಕೊಂಡೆವು. ಯುಎನ್‌ಸಿಆರ್‌ಸಿ 31ನೇ ವಿಧಿಯ ಪ್ರಕಾರ ಮಗುವು ತನ್ನ ವಯಸ್ಸಿಗೆ ತಕ್ಕಂತೆ ಆಟ ಮತ್ತು ಮನರಂಜನಾ ಚಟುವಟಿಕೆಗಳಲ್ಲಿ ತೊಡಗಿಕೊಳ್ಳಲು ಸೂಕ್ತ ವಿರಾಮ ಮತ್ತು ಬಿಡುವಿನ ಹಕ್ಕನ್ನು ಹೊಂದಿದೆ.

ಶಾಲೆಯಲ್ಲಿ ಮಕ್ಕಳ ಹಕ್ಕುಗಳ ವಿಷಯವನ್ನು ಸಮರ್ಪಕವಾಗಿ ನಿಭಾಯಿಸಲಾಗಿದೆ ಮತ್ತು ಮಕ್ಕಳು ಯಾವುದೇ ಹಕ್ಕಿನಿಂದ ವಂಚಿತರಾಗಿದ್ದಾರೆಯೇ ಎಂಬುದನ್ನು ಪತ್ತೆ ಮಾಡಲು ವಿದ್ಯಾರ್ಥಿಗಳು ಪ್ರಶ್ನಾವಳಿಯನ್ನು ಸಿದ್ಧಪಡಿಸಿದ್ದರು. ಇದೇ ಪ್ರಶ್ನಾವಳಿಯನ್ನು ದತ್ತಾಂಶ ಸಂಗ್ರಹಕ್ಕೂ ಬಳಸಿಕೊಳ್ಳಲಾಯಿತು. ವಿದ್ಯಾರ್ಥಿಗಳು ತಮ್ಮ ನೆರೆಹೊರೆಯಲ್ಲಿರುವ ಇತರ ಮಕ್ಕಳ ಸಂದರ್ಶನವನ್ನು ನಡೆಸಿದರು ಮತ್ತು ಅನೇಕ ಪ್ರಮುಖ ವಿಷಯಗಳನ್ನು ಪತ್ತೆ ಮಾಡಲು ಅಂಕಿ-ಅಂಶಗಳನ್ನು ವಿಶ್ಲೇಷಣೆ ಮಾಡಿದರು. ವಿದ್ಯಾರ್ಥಿಗಳು ಸಂದರ್ಶನಗಳನ್ನು ನಡೆಸುವುದರಲ್ಲಿ, ಅಂಕಿ-ಅಂಶಗಳ ನಿರ್ವಹಣೆ ಮತ್ತು ವಿಶ್ಲೇಷಣೆ ಮಾಡುವುದರಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದಲ್ಲದೆ, ಅದೇ ವೇಳೆ ಅವರು ತರಗತಿಯಲ್ಲಿ ಪ್ರತಿಯೊಂದು ಮಗುವು ಕೂಡ ತನಗೆ ಅರ್ಹವಾದ ಹಕ್ಕುಗಳನ್ನು ಪಡೆದೇ ಪಡೆಯಬೇಕು ಎನ್ನುವ ನಿಟ್ಟಿನಲ್ಲಿ ಕೆಲಸ ಮಾಡುತ್ತಿರುವ ಅನೇಕ ವ್ಯಕ್ತಿಗಳು ಮತ್ತು ಗುಂಪುಗಳ ಕುರಿತು ಗಹನವಾದ ಓದಿನ ಕಡೆಗೂ ಗಮನ ಹರಿಸಿದ್ದರು.

## ಅಗತ್ಯಗಳು ಮತ್ತು ಹಕ್ಕುಗಳು

ಹಕ್ಕು ಮತ್ತು ಅಗತ್ಯದ ನಡುವಿನ ವ್ಯತ್ಯಾಸವನ್ನು ಅರ್ಥ ಮಾಡಿಕೊಳ್ಳಲು ಮೊದಲ ಚಟುವಟಿಕೆಯನ್ನು ಕೈಗೊಳ್ಳಲಾಯಿತು. ಇದನ್ನು 2009ರ ಮಾರ್ಗಪಲ್ಲಟ ಮತ್ತು ಪರ್ಯಾಯಗಳು ವಿಷಯುದ ಮೇಲಿನ ಯೂನಿಸೆಫ್ ಟೂಲ್‌ಕಿಟ್‌ನಿಂದ ಸ್ವೀಕರಿಸಲಾಗಿದೆ; ಚಟುವಟಿಕೆ 27; ಒಂದು ಲೋಟ ನೀರು (Diversion and Alternatives to Detention 2009; Activity 27: Glass of Water) – ಇದರಿಂದ ಆಯ್ಕೆ ಮಾಡಿಕೊಳ್ಳಲಾಗಿದೆ. ಹಕ್ಕುಗಳ ಬಗ್ಗೆ ಶಿಬಿರಾರ್ಥಿಗಳು ಈಗ ಹೊಂದಿರುವ ಅಭಿಪ್ರಾಯಗಳನ್ನು ಹೊರತೆಗೆದು ಅಗತ್ಯಗಳು ಮತ್ತು ಹಕ್ಕುಗಳ ನಡುವಿನ ಪ್ರಮುಖ ವ್ಯತ್ಯಾಸಗಳ ಕುರಿತು ಸ್ಪಷ್ಟಪಡಿಸುವುದು ಇದರ ಉದ್ದೇಶವಾಗಿತ್ತು. ಈ ಹೇಳಿಕೆಗಳ ನಡುವಿನ ವ್ಯತ್ಯಾಸ ಏನು; 'ನನಗೆ ಒಂದು ಲೋಟ ನೀರಿನ ಅಗತ್ಯವಿದೆ' ಮತ್ತು 'ನನಗೆ ಒಂದು ಲೋಟ ನೀರು ಪಡೆಯುವ ಹಕ್ಕು ಇದೆ?' ಈ ವಿಷಯ ಪ್ರತಿಪಾದನೆಯಲ್ಲಿ ಅತ್ಯಂತ ಶಕ್ತಿಶಾಲಿಯಾದುದು ಯಾವುದು ಮತ್ತು ಯಾಕೆ? ಈ ಚಟುವಟಿಕೆಯ ಮೂಲಕ ವಿದ್ಯಾರ್ಥಿಗಳ ಅಗತ್ಯಗಳು ಮತ್ತು ಹಕ್ಕುಗಳ ನಡುವಿನ ಮುಖ್ಯ ವ್ಯತ್ಯಾಸವೇನೆಂದರೆ; ಹಕ್ಕುಗಳನ್ನು ಪ್ರತಿಪಾದಿಸುವ (ಹಕ್ಕುಗಳನ್ನು ಹೊಂದಿರುವ) ವ್ಯಕ್ತಿ ಮತ್ತು ಅಂತಹ ಹಕ್ಕುಗಳನ್ನು ಪೂರೈಸುವ (ಕರ್ತವ್ಯ ಹೊಂದಿರುವ) ಜವಾಬ್ದಾರಿಯನ್ನು ಖಾತ್ರಿಪಡಿಸುವ ವ್ಯಕ್ತಿಯ ನಡುವಿನ ಸಂಬಂಧ ಎಂಬುದನ್ನು ಗಮನಿಸಿದರು.

## ಸಂಚಾರಿಕಾರ್ಯಕ್ರಮ

ಸಮಾಜದಲ್ಲಿ ಮಕ್ಕಳ ಸ್ಥಾನಮಾನವನ್ನು ಭದ್ರಗೊಳಿಸುವ ನಿಟ್ಟಿನಲ್ಲಿ ಕಾರ್ಯನಿರ್ವಹಿಸುತ್ತಿರುವ ಬಿಕಾನೇರ್‌ನ ಗ್ರಾಮೀಣ ಆರೋಗ್ಯ, ಸಂಶೋಧನೆ ಮತ್ತು ಅಭಿವೃದ್ಧಿ ಟ್ರಸ್ಟ್ (Rural Health, Research and Development- URMUL)) ಸಹಯೋಗದೊಂದಿಗೆ ಸಂಚಾರಿ ಕಾರ್ಯಕ್ರಮವನ್ನು (ಖೋಜ್) ಏರ್ಪಡಿಸಲಾಗಿತ್ತು. ಸಮಾಜದಲ್ಲಿ ಮಕ್ಕಳ ಅವಕಾಶಗಳನ್ನು ಬಲಪಡಿಸಲು ಮತ್ತು ಅವರ ಉಳಿವನ್ನು ಖಾತರಿಪಡಿಸಲು ಈ ಕಾರ್ಯಕ್ರಮವನ್ನು ಸಮುದಾಯಗಳು, ಸ್ಥಳೀಯ ಅಧಿಕಾರಿಗಳು ಹಾಗು ನೀತಿನಿರೂಪಕರ ಜೊತೆ ಅತ್ಯಂತ ವ್ಯವಸ್ಥಿತವಾಗಿ ರೂಪಿಸಲಾಗಿತ್ತು. ಮಕ್ಕಳ ಹಕ್ಕುಗಳನ್ನು ಬೆಂಬಲಿಸುವುದರಲ್ಲಿ ತನ್ನನ್ನು ತೊಡಗಿಸಿಕೊಂಡಿರುವ ಇದು ಮಕ್ಕಳ ಸಹಾಯವಾಣಿ (ಚೈಲ್ಡ್‌ಲೈನ್) 1098 ನಿರ್ವಹಣೆಯನ್ನು ಕೂಡ ಮಾಡುತ್ತಿದೆ. ಗ್ರಾಮದಲ್ಲಿನ ಸರ್ಕಾರಿ ಶಾಲೆಯ ಮಕ್ಕಳೊಂದಿಗೆ ತೊಡಗಿಸಿಕೊಂಡು ಮಕ್ಕಳ ಹಕ್ಕುಗಳ ಬಗ್ಗೆ, ಅದರಲ್ಲೂ ಮುಖ್ಯವಾಗಿ ಬಿಡುವು ಮತ್ತು ವಿರಾಮ ಸಮಯದ ಹಕ್ಕು, ಇದಕ್ಕೆ ಸಂಬಂಧಿಸಿದಂತೆ ಅವರಿಗಿರುವ ಅರಿವನ್ನು ಅರ್ಥಮಾಡಿಕೊಳ್ಳಲು ಬಯಸಿದೆವು. ನಾವು ಒಂದೇ ಹಕ್ಕನ್ನು ಎರಡು ವಿಭಿನ್ನ ಸನ್ನಿವೇಶಗಳಲ್ಲಿ ಅರ್ಥ ಮಾಡಿಕೊಳ್ಳುವುದನ್ನು ಕಲಿಯುತ್ತೇವೆ ಎನ್ನುವ ರೀತಿಯಲ್ಲಿ ಸಂಚಾರಿ ಕಾರ್ಯಕ್ರಮದ ವಿನ್ಯಾಸ ಮತ್ತು ಪರಿಕಲ್ಪನೆಯನ್ನು ಮಾಡಲಾಗಿತ್ತು.

ಬಿಕಾನೇರ್‌ನ ಬಜ್ಜು ಗ್ರಾಮದಲ್ಲಿರುವ ಸರ್ಕಾರಿ ಶಾಲೆಯನ್ನು ಇದಕ್ಕಾಗಿ ನಾವು ಆಯ್ಕೆ ಮಾಡಿದ್ದೆವು. ಹೆರಿಟೇಜ್ ಶಾಲೆಯಲ್ಲಿ ನಡೆಸಲಾದ ದತ್ತಾಂಶ ಸಂಗ್ರಹ ಹಾಗು ಅವುಗಳ ವಿಶ್ಲೇಷಣೆಗೆ ನಡೆಸಿದ ಪ್ರಕ್ರಿಯೆಯನ್ನೇ ಬಜ್ಜು ಸರ್ಕಾರಿ ಶಾಲೆಯ ವಿದ್ಯಾರ್ಥಿಗಳು ಕೂಡ ಕೈಗೊಂಡರು.

ಈ ಹೊತ್ತಿಗೆ ಎಲ್ಲ ಯುವ ಮನಸ್ಸುಗಳಲ್ಲಿ ಹಲವಾರು ಪ್ರಶ್ನೆಗಳು ತುಂಬಿಕೊಂಡಿದ್ದವು. ಅವರು ಹೆಚ್ಚು ಹೆಚ್ಚು ಕುತೂಹಲಕ್ಕೆ ಒಳಗಾಗುತ್ತಿದ್ದಂತೆ ನಮ್ಮ ಬಹುನಿರೀಕ್ಷಿತ ಐದು ದಿನಗಳ ಸುದೀರ್ಘಾವಧಿಯ ಸಂಚಾರಿ ಕಲಿಕಾ ಪಯಣ ಖೋಜ್ ಆರಂಭವಾಯಿತು. ಹೆರಿಟೇಜ್ ಶಾಲೆಯ ವಿದ್ಯಾರ್ಥಿಗಳು ಮತ್ತು ಶಿಕ್ಷಕರು ರೈಲಿನಲ್ಲಿ ಬಜ್ಜು ಗ್ರಾಮಕ್ಕೆ ಪ್ರಯಾಣ ಆರಂಭಿಸಿದರು ಮತ್ತು ಅವರನ್ನು ಯುಆರ್‌ಎಂಯುಎಲ್ ಅತಿಥಿ ಗೃಹಗಳಲ್ಲಿ ಇರಿಸಲಾಯಿತು.

ಬಜ್ಜು ಗ್ರಾಮದ ಸರ್ಕಾರಿ ಶಾಲೆಯ ವಿದ್ಯಾರ್ಥಿಗಳೊಂದಿಗೆ ಆತ್ಮೀಯವಾಗಿ ಬೆರೆಯುವ, ಕೆಲಸ ಮಾಡುವ ಪರಂಪರಾ ಶಾಲೆಯ ವಿದ್ಯಾರ್ಥಿಗಳು ಮತ್ತು ಶಿಕ್ಷಕರಿಗೆ ಒಟ್ಟಾರೆ ಅದೊಂದು ಭಿನ್ನ ಅನುಭವವಾಗಿತ್ತು. ಸಣ್ಣ ಸಣ್ಣ ಗುಂಪುಗಳಲ್ಲಿ ಜೊತೆಯಾಗಿ ಒಂದು ದಿನವನ್ನು ಕಳೆಯುತ್ತಿದ್ದಂತೆ ಎಲ್ಲರೂ ಪರಿಚಿತರಾಗಿ ಪರಸ್ಪರ ಸಂಪರ್ಕ-ಸಂವಹನ ಸಾಧ್ಯವಾಯಿತು. ನಾವು ಮಕ್ಕಳಿಂದ ಪಡೆದ ಅಂಕಿ-ಅಂಶಗಳು ಹೆಣ್ಣು ಮಗುವಿಗೆ ಸಂಬಂಧಿಸಿದಂತೆ ಸಾಕಷ್ಟು ಭಿನ್ನವಾಗಿದ್ದವು. ಗ್ರಾಮದಲ್ಲಿ ಹೆಣ್ಣು ಮಕ್ಕಳಿಗೆ ಆಟವಾಡಲು ಸಾಕಷ್ಟು ಸಮಯವೇ ಸಿಗುವುದಿಲ್ಲ, ಹಳ್ಳಿಯಲ್ಲಿ ಅವರು ಸಾಕಷ್ಟು ಕೆಲಸಗಳನ್ನು ಮಾಡಬೇಕಾದ ಅನಿವಾರ್ಯವಿತ್ತು. ಆದರೆ ಗುರುಗಾಂವ್ ನಗರದಲ್ಲಿ ಹೆಣ್ಣು ಮಕ್ಕಳಿಗೆ ಇದ್ದ ಸಮಸ್ಯೆ ಏನೆಂದರೆ ಅಲ್ಲಿ ಸುರಕ್ಷಿತವಾದ ಜಾಗಗಳೇ ಇರಲಿಲ್ಲ.

ಮಕ್ಕಳೆಲ್ಲ ಮರಳಿನ ದಿಣ್ಣೆಯ ಮೇಲೆ ಕುಳಿತು ಸಂಜೆಯ ಸೂರ್ಯಾಸ್ತವನ್ನು ವೀಕ್ಷಿಸುತ್ತ ಕಳೆದರು. ಒಂದೇ ವಯಸ್ಸಿನ ಮಗುವಿನ ಜೀವನವು ಹಳ್ಳಿಗೂ ನಗರಕ್ಕೂ ಎಷ್ಟು ಭಿನ್ನವಾಗಿದೆ ಎಂಬುದನ್ನು ಅವರು ಕಂಡುಕೊಂಡರು. ಆಳವಾದ ಚರ್ಚೆ ಮತ್ತು ಚಿಂತನಾರ್ಹ ಅಭಿವ್ಯಕ್ತಿಗಳು ಅನೇಕ ಸಂದರ್ಭದಲ್ಲಿ ಯಾತನಾಮಯವಾಗಿದ್ದವು ಮತ್ತು ಅನೇಕರ ಕಣ್ಣುಗಳು ಒದ್ದೆಯಾಗಿದ್ದವು. ಇಂತಹ ಸಂದರ್ಭದಲ್ಲಿಯೇ ನಮ್ಮ ಮುಂದಿನ ಬಹುಮುಖ್ಯ ಯೋಜನೆ ಸಕ್ರಿಯ ಹಾಗು ಜಾಗೃತ ನಾಗರಿಕರು ವಿಷಯದ ಕಡೆಗೆ ಹೊರಳಿತು. ಮಕ್ಕಳ ಹಕ್ಕುಗಳ ಬಗ್ಗೆ ಜನರನ್ನು ಜಾಗೃತಗೊಳಿಸುವ ಬಗ್ಗೆ ನಿರ್ಧಾರ ಕೈಗೊಂಡ ಮಕ್ಕಳು ಸಮಾರೋಪಕ್ಕಾಗಿ ಸಿದ್ಧತೆ ಆರಂಭಿಸಿದರು.

**ಬದಲಾವಣೆಯ ಭಾಗವಾಗಿ**

**ವಿಶೇಷ ಕಾರ್ಯಯಾತ್ರೆಯ ಪಕ್ಷಿನೋಟ**

**ದೊಡ್ಡ ಯೋಜನೆ**

**ವ್ಯವಸ್ಥೆ/ಸಮಾಜದಲ್ಲಿ ಅಸ್ತಿತ್ವದಲ್ಲಿರುವ ಘನತೆ ಮತ್ತು ಕಟ್ಟಳೆಗಳು ಸಮಾನತೆ ಮತ್ತು ನ್ಯಾಯವನ್ನು ಖಾತರಿಗೊಳಿಸುತ್ತವೆ.**
**ಜಾಗೃತ ಹಾಗೂ ಸಕ್ರಿಯ ನಾಗರಿಕರು ಪ್ರಜಾಪ್ರಭುತ್ವದ ಜೀವದ್ರವ್ಯಗಳು.**

**ಮಾರ್ಗದರ್ಶಿ ಪ್ರಶ್ನೆಗಳು**

**ಪ್ರಜಾಪ್ರಭುತ್ವವು ಸಮಾನತೆ ಮತ್ತು ನ್ಯಾಯವನ್ನು ಹೇಗೆ ಒದಗಿಸುತ್ತದೆ ಮತ್ತು ಆ ಮೂಲಕ ಹೇಗೆ ವೈವಿಧ್ಯತೆಯನ್ನು ಕಾಪಾಡುತ್ತದೆ?**
**ಯಾರು ಜಾಗೃತ ನಾಗರಿಕ? ಒಂದು ಪ್ರಜಾಪ್ರಭುತ್ವದಲ್ಲಿ ಸಕ್ರಿಯ ನಾಗರಿಕನ ಪಾತ್ರ ಹೇಗಿರುತ್ತದೆ?**

**ಗಮನಿಸಬೇಕಾದ ಕೌಶಲಗಳು**

***ವಿಮರ್ಶಾತ್ಮಕ ಯೋಚನೆ**
***ಸತತ ಪರಿಶ್ರಮ**

**ಕಾರ್ಯಯಾತ್ರೆಯ ಮುಕ್ತಾಯ**

ವಿದ್ಯಾರ್ಥಿಗಳು ನಿರ್ಧರಿಸಿದಂತೆ ಮಕ್ಕಳ ಹಕ್ಕುಗಳ ಕುರಿತ ಬೀದಿ ನಾಟಕದ ಮೂಲಕ ಈ ಕಲಿಕಾ ಕಾರ್ಯಯಾತ್ರೆಯ ಮುಕ್ತಾಯವು ನಡೆಯಿತು. ನಮ್ಮ ಜೊತೆ ಇಬ್ಬರು ರಂಗಕರ್ಮಿಗಳಿದ್ದರು. ಈ ನಾಟಕದ ವಸ್ತು ವಿಷಯ, ಸಂಭಾಷಣೆಗಳು ಮತ್ತು ಕಥಾ ವಸ್ತುವನ್ನು ವಿದ್ಯಾರ್ಥಿಗಳ ಜೊತೆಗಿನ ಮಾತುಕತೆ–ಸಂವಾದದ ಸಂದರ್ಭದಲ್ಲೇ ರೂಪಿಸಬೇಕಾಗಿತ್ತು. ಹಾಗಾಗಿ ಪ್ರತಿದಿನ ನಾವು ವಿಶೇಷವಾಗಿ ಮಕ್ಕಳ ಹಕ್ಕುಗಳ ಜಾಗೃತಿಯ ಮೇಲೆ ಕೆಲಸ ಮಾಡುತ್ತಿದ್ದುದರಿಂದ ಆಯಾ ದಿನದ ಸನ್ನಿವೇಶಗಳೇ ನಾಟಕಕ್ಕೆ ವಸ್ತುವಾಗಿದ್ದವು.

ಎರಡು ದಿನಗಳ ಬಳಿಕ ಬಜ್ಜು ಶಾಲೆಯ ವಿದ್ಯಾರ್ಥಿಗಳು ತಾಲೀಮು ನಡೆಸಲು ಯುಆರ್‌ಎಂಯುಎಲ್ ಕ್ಯಾಂಪಸ್‌ಗೆ ಬರುವುದು ಎಂದು ನಿರ್ಧರಿಸಲಾಯಿತು. ನಾಟಕದ ಸಂಭಾಷಣೆ, ಕಥಾವಸ್ತು ಮತ್ತು ಅಭಿನಯಿಸುವವರ ಪಟ್ಟಿ ಅಂತಿಮಗೊಳ್ಳುತ್ತಿದ್ದಂತೆ ಕೊನೆಯ ದಿನವೂ ಕೂಡ ಬಂದಿತು. ಅಂದು ಎರಡೂ ಶಾಲೆಗಳ ವಿದ್ಯಾರ್ಥಿಗಳು ಸೇರಿ ಬಾಲ್ ಅಧಿಕಾರ್ ಎಂಬ ನಾಟಕವನ್ನು ಪ್ರಸ್ತುತಪಡಿಸಿದರು.


ಗುರುಗಾಂವ್‌ಗೆ ಮರಳಿದ ಬಳಿಕ ಪರಂಪರಾ ಶಾಲೆಯ ವಿದ್ಯಾರ್ಥಿಗಳು ಇಂಗ್ಲಿಷ್‌ನಲ್ಲಿ 'ನನ್ನೊಳಗಿನ ಅಧಿಕಾರ' (The Power Within Me) ಮತ್ತು ಹಿಂದಿಯಲ್ಲಿ 'ಬಾಲ್ ಅಧಿಕಾರೋಂ ಕಿ ಖೋಜ್' ಕುರಿತು ಕಾರ್ಯನಿಯೋಜನೆ ಪ್ರಸ್ತುತಪಡಿಸಿದರು. ಹಲವು ಸುತ್ತಿನಲ್ಲಿ ಕರಡು ಪ್ರತಿಗಳನ್ನು ಸಿದ್ಧಪಡಿಸಲಾಗಿತ್ತು. ಇದನ್ನು ವಿದ್ಯಾರ್ಥಿಗಳಿಗೆ ನೀಡಲಾದ ಪರಿಶೀಲನಾ ಪಟ್ಟಿಯೊಂದಿಗೆ ಸ್ವಯಂ

ಮತ್ತು ಸಮವಯಸ್ಕರು ಮೌಲ್ಯಮಾಪನ ಮಾಡಿದರು. ಗುರುಗಾಂವ್‌ನ ಬೀದಿಗಳಲ್ಲಿ ನಾಟಕವನ್ನು ಪ್ರದರ್ಶನ ಮಾಡಿದ ಬಳಿಕ ಕಲಿಕಾ ಗುರಿಗಳ ಆಧಾರದಲ್ಲಿ ಸ್ವಯಂ ಮೌಲ್ಯಮಾಪನ ಮಾಡಿಕೊಳ್ಳುವಂತೆ ವಿದ್ಯಾರ್ಥಿಗಳನ್ನು ಕೇಳಲಾಯಿತು. ಇಡೀ ಅಭಿಯಾನದುದ್ದಕ್ಕೂ ಪರಿಶೀಲನಾ ಪಟ್ಟಿ ಮತ್ತು ರೂಬ್ರಿಕ್ ನೆರವಿನೊಂದಿಗೆ ಕಲಿಕಾ ಗುರಿಗಳು ಕಲಿಕಾರ್ಥಿಗಳು ಕಾರ್ಯ-ನಿರ್ವಹಿಸುವಂತೆ ಮಾಡುವಲ್ಲಿ ಹಾಗು ಬದಲಾವಣೆಯ ಭಾಗವಾಗಿ ಕಾರ್ಯಯಾತ್ರೆಯು ಯಶಸ್ಸಿನೊಂದಿಗೆ ಮುಕ್ತಾಯಗೊಳ್ಳಲು ನಮಗೆ ಸಹಕಾರಿಯಾಯಿತು.

ಶಾಲೆಯಲ್ಲಿ ಲೀಲಾ ಸೇಠ್ ಅವರನ್ನು ಭೇಟಿ ಮಾಡಲು ಅವಕಾಶ ಸಿಕ್ಕಿದ್ದು ಈ ವಿಶೇಷಯಾತ್ರೆಯ ಇನ್ನೊಂದು ಮುಖ್ಯ ಅಂಶ. ಲೀಲಾ ಸೇಠ್ (1930-2017) ಅವರು ದೆಹಲಿ ಹೈಕೋರ್ಟ್‌ನ ಮೊದಲ ಮಹಿಳಾ ನ್ಯಾಯಾಧೀಶರಾಗಿದ್ದವರು ಮತ್ತು ರಾಜ್ಯವೊಂದರ ಹೈಕೋರ್ಟಿನ ಮುಖ್ಯನ್ಯಾಯಮೂರ್ತಿಯಾಗಿ ಸೇವೆ ಸಲ್ಲಿಸಿದ್ದವರು ಹಾಗೂ ಯುವ ಓದುಗರಿಗೆ ಭಾರತದ ಸಂವಿಧಾನವನ್ನು ಪರಿಚಯಿಸುವ 'ವಿ ದಿ ಚಿಲ್ಡ್ರನ್' ಕೃತಿಯ ಲೇಖಕರು.

**ಉಪಸಂಹಾರ**

ಶಿಕ್ಷಕರಾದ ನಮಗೆ ಈ ವಿಶೇಷಯಾತ್ರೆಯು ಇಡೀ ಕೋರ್ಸಿನ ಉದ್ದಕ್ಕೂ ನಮ್ಮ ಪಾಲಿಗೆ ಅತ್ಯಂತ ಆಪ್ತವಾದುದಾಗಿತ್ತು ಎಂದರೆ ಅತಿಶಯೋಕ್ತಿಯಲ್ಲ. ಬದಲಾವಣೆಗಾಗಿ ಯುವ ಮನಸ್ಸುಗಳು ಸಮಾನ ಗುರಿಯನ್ನು ಸಾಧಿಸಲು ಹೇಗೆ ಮಾಹಿತಿಯನ್ನು ಪಡೆಯುತ್ತಿದ್ದವು ಮತ್ತು ಪರಸ್ಪರ ಸಂಗ್ರಹಿಸುವ ಕೆಲಸ ಮಾಡುತ್ತಿದ್ದವು ಎಂಬುದಕ್ಕೆ ನಾವು ಸಾಕ್ಷಿಯಾಗಿದ್ದೆವು. ನಮ್ಮ ಮಕ್ಕಳ ಆಳವಾದ ಚಿಂತನೆಗಳು, ಮಕ್ಕಳ ತಿಳುವಳಿಕೆಯಿಂದ ಬಹುದೂರವೇ ಉಳಿಯುವಂತೆ ಕಾಣುತ್ತಿದ್ದ ಹಕ್ಕುಗಳು, ಪ್ರಜಾಪ್ರಭುತ್ವ, ಸಮಾನತೆ-ಯಂತಹ ಪರಿಕಲ್ಪನೆಗಳು ಕೂಡ ಸೂಕ್ತವಾಗಿ ವಿನ್ಯಾಸಗೊಳಿಸಲಾದ ಬೋಧನಾ ಕಾರ್ಯತಂತ್ರಗಳಾಗಲು ಸಾಧ್ಯವಿದೆ ಎಂಬ ನಮ್ಮ ನಂಬಿಕೆಯನ್ನು ಇನ್ನಷ್ಟು ಗಟ್ಟಿಗೊಳಿಸಿದವು. ಶಿಕ್ಷಕರಾಗಿ ಉದ್ದಕ್ಕೂ ಇದ್ದ ಪಾತ್ರವೆಂದರೆ ಮಕ್ಕಳ ಯೋಜನೆಗೆ ಸಹಕಾರವನ್ನು ನೀಡುವುದು ಮತ್ತು ಅವರನ್ನು ಸಕ್ರಿಯ ಹಾಗು ತಿಳುವಳಿಕೆಯುಳ್ಳ ನಾಗರಿಕರನ್ನಾಗಿ ಮಾಡಲು ದಾರಿ ತೋರುವುದು.



| | |
|---|---|
| **ಸಮಾಜ ವಿಜ್ಞಾನ** | ಉದಾಹರಣೆಗಳನ್ನು ಬಳಸಿಕೊಂಡು ನಾನು ವೈವಿಧ್ಯತೆ, ತಾರತಮ್ಯ ಮತ್ತು ಅಸಮಾನತೆ ನಡುವಿನ ವ್ಯತ್ಯಾಸಗಳನ್ನು ಗುರುತಿಸಬಹುದು.<br>ನನ್ನ ಸುತ್ತಲಿನ ಅಸಮಾನತೆಗೆ ಪೂರ್ವಗ್ರಹಗಳು ಹೇಗೆ ಕೊಡುಗೆ ನೀಡುತ್ತವೆ ಎಂಬುದನ್ನು ನಾನು ಅಳೆಯಬಹುದು.<br>ಪ್ರಜಾಪ್ರಭುತ್ವದ ಕಾರ್ಯನಿರ್ವಹಣೆಯ ಮೇಲೆ ಪ್ರಭಾವ ಬೀರುವ ಪ್ರಮುಖ ಅಂಶಗಳನ್ನು ನಾನು ಗುರುತಿಸಬಹುದು.<br>ಸಮಾಜದಲ್ಲಿ ಸಮಾನತೆ, ಘನತೆ ಮತ್ತು ನ್ಯಾಯವನ್ನು ಖಾತರಿಪಡಿಸಲು ಆಡಳಿತದ ರೂಪದಲ್ಲಿ ಪ್ರಜಾಪ್ರಭುತ್ವವು ಹೇಗೆ ಅನುಕೂಲಕರವಾಗಿದೆ ಎಂಬುದನ್ನು ನಾನು ಸಮರ್ಥಿಸಬಹುದು.<br>ಸರ್ವರಿಗೂ ಸಮಾನತೆ ಮತ್ತು ನ್ಯಾಯವನ್ನು ಖಾತ್ರಿಗೊಳಿಸುವ ಸಂವಿಧಾನದ ನಿರ್ದಿಷ್ಟವಾದ ಭಾಗಗಳನ್ನು ನಾನು ಉಲ್ಲೇಖ ಮಾಡಬಲ್ಲೆ.<br>ನನ್ನ ಸುತ್ತಲಿನ ತಾರತಮ್ಯದ ಬಗ್ಗೆ ನಿಜ ಜೀವನದ ಉದಾಹರಣೆಗಳನ್ನು ವಿಶ್ಲೇಷಣೆ ಮಾಡಲು ನಾನು ಸಂವಿಧಾನದ ನಿರ್ದಿಷ್ಟ ಭಾಗಗಳನ್ನು ಉಲ್ಲೇಖಿಸಬಲ್ಲೆ.<br>ನನ್ನ ಸಮುದಾಯದಲ್ಲಿರುವ ಪ್ರಜಾಪ್ರಭುತ್ವ ಪ್ರಕ್ರಿಯೆಯ ಅನುಷ್ಠಾನವನ್ನು ನಾನು ಮೌಲ್ಯಮಾಪನ ಮಾಡಬಲ್ಲೆ.<br>ನನ್ನ ಸುತ್ತಲಿನ ಸಮಾಜದಲ್ಲಿ ಅಸ್ತಿತ್ವದಲ್ಲಿರುವ ಪ್ರಜಾಸತ್ತಾತ್ಮಕ ಪ್ರಕ್ರಿಯೆಗಳ ಆಳವಾದ ವಿಶ್ಲೇಷಣೆಗೆ ಅನುಕೂಲ ಮಾಡಿಕೊಡಲು, ತನಿಖೆ ಮಾಡಲು ತೀಕ್ಷ್ಣ ಸ್ವರೂಪದ ಪ್ರಶ್ನೆಗಳನ್ನು ನಾನು ಕೇಳಬಲ್ಲೆ. |
| **ಓದುವುದು** | ಒಂದು ಪಠ್ಯವನ್ನು ಅರ್ಥ ಮಾಡಿಕೊಳ್ಳಲು ನಾನು ಗ್ರಹಿಕಾ ತಂತ್ರಗಳನ್ನು ಬಳಸಿಕೊಳ್ಳಬಹುದು.<br>ಒದಗಿಸಲಾದ ಪಠ್ಯದಿಂದ ಅಗತ್ಯವಿರುವ ಮಾಹಿತಿಯನ್ನು ಹೊರತೆಗೆಯಲು ನಾನು ಸಮರ್ಪಕವಾದ ಓದುವ ಕಾರ್ಯತಂತ್ರವನ್ನು ಬಳಸಬಹುದು. |
| **ಬರೆಯುವುದು** | ವಿಶ್ಲೇಷಣೆ, ಚಿಂತನೆ ಮತ್ತು ಸಂಶೋಧನೆಗೆ ಬೆಂಬಲ ನೀಡಲು ಮತ್ತು ಅದನ್ನು ಅಗತ್ಯವಿರುವ ರೂಪದಲ್ಲಿ ಪ್ರಸ್ತುತಪಡಿಸಲು ಅನೇಕ ಟಿಪ್ಪಣಿಗಳಿಂದ ನಾನು ಪುರಾವೆಯನ್ನು ಪಡೆಯಬಲ್ಲೆ. |
| **ಮಾತನಾಡುವುದು** | ನಿರ್ದಿಷ್ಟಪಡಿಸಿದ ಸ್ವರೂಪಕ್ಕೆ ತಕ್ಕ ವಿಧಾನದಲ್ಲಿ ವಿಶ್ವಾಸ, ಸ್ಪಷ್ಟತೆ ಮತ್ತು ಸಂಘಟಿತವಾಗಿ ನನ್ನ ತಿಳುವಳಿಕೆಯನ್ನು ಪ್ರಸ್ತುತಪಡಿಸಬಲ್ಲೆ. |
| **ವಿಮರ್ಶಾ ಚಿಂತನೆ** | ಸಮಾಜದಲ್ಲಿ ಅಸ್ತಿತ್ವದಲ್ಲಿರುವ ಪ್ರಜಾಸತ್ತಾತ್ಮಕ ಪ್ರಕ್ರಿಯೆಯ ಆಳವಾದ ವಿಶ್ಲೇಷಣೆ ಮತ್ತು ಪುರಾವೆಗೆ ನಾನು ವಿಮರ್ಶಾತ್ಮಕವಾದ ಪ್ರಶ್ನೆಗಳನ್ನು ಕೇಳಬಲ್ಲೆ. |
| **ಗುಣ ಮತ್ತು ಸಂಸ್ಕೃತಿ** | ನನ್ನ ಹಾಗೂ ಇತರರ ಕೆಲಸವನ್ನು ಸುಧಾರಿಸಲು ನಾನು ರಚನಾತ್ಮಕವಾದ ಅಭಿಪ್ರಾಯವನ್ನು ಕೊಡಬಲ್ಲೆ ಮತ್ತು ನಿರೀಕ್ಷಿಸಬಲ್ಲೆ.<br>ಸಹಭಾಗಿತ್ವಕ್ಕೆ ನನ್ನ ಸಹ ಸದಸ್ಯರಿಗೆ ಸಮಾನವಾದ ಅವಕಾಶ ನೀಡುವ ಮೂಲಕ ನಾನು ಕೂಡ ಒಳಗೊಳ್ಳುವ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳಬಲ್ಲೆ.<br>ಮಾತನಾಡುವ ವ್ಯಕ್ತಿಯ ನುಡಿಗಳನ್ನು ಗಮನವಿಟ್ಟು ಕೇಳುವ ಮೂಲಕ ನಾನು ನನ್ನ ಗೌರವವನ್ನು ನೀಡಬಲ್ಲೆ |
| **ದೃಶ್ಯ ಹಾಗು ಪ್ರದರ್ಶನ ಕಲೆ** | ನನ್ನ ನೆರೆಹೊರೆಯಲ್ಲಿ ಪ್ರಚಾರಮಾಡಲು ನಾನು ರಂಗಭೂಮಿ (ಬೀದಿ ನಾಟಕ) ಮಾಧ್ಯಮವನ್ನು ಬಳಕೆ ಮಾಡಬಹುದು. |



**ಶಿಲ್ಪಿ ಹಂಡಾ** ಅವರು ಮಕ್ಕಳ ಸಮಾಜೋ–ಭಾವಾನಾತ್ಮಕತೆಯ ಅಭಿವೃದ್ಧಿಯಲ್ಲಿ ಅತೀವ ಆಸಕ್ತಿಯನ್ನು ಹೊಂದಿದ ಶಿಕ್ಷಕಿ. ಕಳೆದ 12 ವರ್ಷಗಳಿಂದ ಮಾಧ್ಯಮಿಕ ಪಠ್ಯ ಕಾರ್ಯಕ್ರಮಕ್ಕೆ ಬೋಧನಾ ನಾಯಕಿಯಾಗಿ ಗುರುಗಾಂವ್‌ನ ಪರಂಪರಾ ಪ್ರಯೋಗಾತ್ಮಕ ಕಲಿಕಾ ಶಾಲೆಯೊಂದಿಗೆ ಅವರು ತೊಡಗಿಸಿಕೊಂಡಿದ್ದಾರೆ. ಅವರು ಹೊಸ ಶಿಕ್ಷಕರಿಗೆ ತರಬೇತಿ ನೀಡುವಲ್ಲಿಯೂ ಕೆಲಸ ಮಾಡಿದವರು. ರಸಾಯನಶಾಸ್ತ್ರವನ್ನು ವಿಶೇಷ ವಿಷಯವನ್ನಾಗಿ ತೆಗೆದುಕೊಂಡು ದಿಲ್ಲಿ ವಿಶ್ವವಿದ್ಯಾಲಯದಿಂದ ವಿಜ್ಞಾನ ಪದವಿಯನ್ನು ಪಡೆದಿರುವ ಶಿಲ್ಪಿ ಅವರು ಪ್ರಸ್ತುತ ಸ್ವೀಡನ್‌ನ್ನಿನ ಶಾಲೆಯೊಂದರಲ್ಲಿ ಕೆಲಸ ಮಾಡುತ್ತಿದ್ದಾರೆ. ಅವರನ್ನು ಈ ಮಿಂಚಂಚೆಯಲ್ಲಿ ಸಂಪರ್ಕಿಸಬಹುದು: shilpi.nischal@gmail.com



**ರೊನಿತಾ ಶರ್ಮಾ** ಅವರು ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯದಲ್ಲಿ ಬೋಧನಾ ಸಿಬ್ಬಂದಿಯಾಗಿದ್ದಾರೆ. ಅವರು ಬೆಂಗಳೂರಿನ ಮುಂದುವರಿಕೆ ಶಿಕ್ಷಣಕ್ಕಾಗಿರುವ ಶಾಲೆಯಲ್ಲಿನ ಮೌಲ್ಯಮಾಪನ ಮತ್ತು ಮಾನ್ಯತಾ ಸಂಸ್ಥೆಯೊಂದಿಗೆ ಕೆಲಸ ಮಾಡುತ್ತಾರೆ. ಇದಕ್ಕೂ ಮುನ್ನ ಅವರು ಹಿರಿಯ ಪ್ರಾಥಮಿಕ, ಮಾಧ್ಯಮಿಕ ಮತ್ತು ಹೈಯರ್ ಸೆಕೆಂಡರಿ ವರ್ಗಗಳ ವಿದ್ಯಾರ್ಥಿಗಳಿಗೆ ಸಮಾಜ ವಿಜ್ಞಾನವನ್ನು ಬೋಧಿಸಿದ್ದಾರೆ. ಅವರನ್ನು ಈ ಮಿಂಚಂಚೆ ಮೂಲಕ ಸಂಪರ್ಕಿಸಬಹುದು:
ronita.sharma@azimpremjifoundation.org

ಅನುವಾದ: **ಮಂಜುನಾಥ್ ಚಾಂದ್** । ಪರಿಶೀಲನೆ: **ನಾಗಮಣಿ ಎಸ್.ಎನ್.**